KASM620024192025

Presented on : 10-10-2025
Registered on : 10-10-2025
Decided on : 04-08-2026
Duration: 0 years, 9 months, 25 days

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಾಗರ.

: **ಉಪಸ್ಥಿತರು**:

ಶ್ರೀ **ಮಾದೇಶ ಎಂ.ವಿ.,** ಬಿ.ಕಾಂ., ಎಲ್.ಎಲ್.ಬಿ.,
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಸಾಗರ.

ದಿನಾಂಕಃ 04 ನೇ ಆಗಸ್ಟ್ 2026

ಸಿ.ಸಿ. ಸಂಖ್ಯೆ 1672/2025

ಪಿರ್ಯಾದಿದಾರರುಃ

ಕಿರಣ ಇ. ಬಿನ್ ಈಶ್ವರಪ್ಪ ಎಂ.,
ವಯಸ್ಸು ಸುಮಾರು 37 ವರ್ಷ,
ವಾಸಃ ನಂ. 235/1, 3 ನೇ ಮೈನ್,
6 ನೇ ಕ್ರಾಸ್, ರಾಮೇಶ್ವರ ಸರ್ಕಲ್ ಹತ್ತಿರ,
ಎಸ್.ಎನ್. ನಗರ, ಸಾಗರ ನಗರ.

(ಶ್ರೀ ಇ.ಎನ್./ಜೆ.ಎಂ.ಎ.,ವಕೀಲರು)

ವಿರುದ್ಧ

ಆರೋಪಿ: ಜಯಕುಮಾರ ಎಂ.ಡಿ. ಬಿನ್ ದ್ಯಾವಯ್ಯ,
ವಯಸ್ಸು ಸುಮಾರು 59 ವರ್ಷ,
ಕೆ.ಎಸ್.ಆರ್.ಟಿ.ಸಿ. ಡ್ರೈವರ್,
ವಾಸಃ ನಂ.29, "ಶ್ರೀ ಸಮ್ಯಕ" ನಿಲಯ,
3 ನೇ ಕ್ರಾಸ್, ನೀರಕೋಡು ಬಡಾವಣೆ,
ವಿನೋಭಾ ನಗರ ಹಿಂಭಾಗ,
ಸಾಗರ ನಗರ, ಶಿವಮೊಗ್ಗ ಜಿಲ್ಲೆ.

(ಶ್ರೀ ಐ.ಎನ್.ಎಸ್.,ವಕೀಲರು)

ತೀರ್ಪು

ಆರೋಪಿಯು ಲಿಖಿತ ಪತ್ರಗಳ ವರ್ಗಾವಣೆ ಕಾಯ್ದೆಯ ಕಲಂ 138 ರಡಿಯಲ್ಲಿ ಅಪರಾಧವೆಸಗಿದ್ದಾರೆಂದು, ಪ್ರಸ್ತುತ ಖಾಸಗಿ ದೂರನ್ನು ದಂಡ ಪ್ರಕ್ರಿಯಾ ಸಂಹಿತೆಯ ಕಲಂ 200 ರ ರಡಿಯಲ್ಲಿ ಪಿರ್ಯಾದುದಾರರು ಸಲ್ಲಿಸಿರುತ್ತಾರೆ.

2. **ಪಿರ್ಯಾದಿಯ ದೂರಿನ ಸಂಕ್ಷಿಪ್ತ ಸಾರಾಂಶವೇನೆಂದರೆಃ-**

ಆರೋಪಿ ಮತ್ತು ಪಿರ್ಯಾದಿಯು ಪರಿಚಯಸ್ಥರಾಗಿದ್ದು, ಆರೋಪಿತನು ತಮ್ಮ ಗೃಹ ನಿರ್ಮಾಣದ ಸಂಬಂಧ ತುರ್ತು ಹಣದ ಅವಶ್ಯಕತೆ ಇದೆ ಎಂದು ಹೇಳಿ, ದಿನಾಂಕಃ 16.02.2021 ರಂದು 7,50,000/- ರೂ. ಗಳನ್ನು ನಗದು

ರೂಪದಲ್ಲಿ ಕೈಗಡ ಸಾಲವಾಗಿ ಪಡೆದುಕೊಂಡು, ಸದರಿ ಹಣವನ್ನು 6 ತಿಂಗಳೊಳಗಾಗಿ ಮರಪಾವತಿಸುವುದಾಗಿ ತಿಳಿಸಿರುತ್ತಾನೆ. ನಂತರ, 2021 ಸೆಪ್ಟೆಂಬರ್ ತಿಂಗಳ ಮೊದಲನೆಯ ವಾರದಲ್ಲಿ ಸದರಿ ಹಣವನ್ನು ಮರುಪಾವತಿ ಮಾಡುವಂತೆ ಆರೋಪಿತನನ್ನು ಪಿರ್ಯಾದಿಯು ಒತ್ತಾಯಿಸಿದ ಮೇರೆಗೆ, ಸದರಿ ಹಣವನ್ನು ಕೊಡಲು ಇನ್ನೂ ಎರಡು ತಿಂಗಳು ಕಾಲಾವಕಾಶ ಬೇಕು ಎಂದು ಆರೋಪಿತನು ಕೇಳಿಕೊಂಡ ಮೇರೆಗೆ, ಎರಡು ತಿಂಗಳ ಕಾಲಾವಕಾಶವನ್ನು ಪಿರ್ಯಾದಿಯು ಆರೋಪಿತನಿಗೆ ನೀಡಿದನು. ಸದರಿ ಸಂದರ್ಭದಲ್ಲಿ ಆರೋಪಿತನು ಸಾಲದ ಹಣದ ಮರುಪಾವತಿಗಾಗಿ ಸಾಗರದ ಕೆನರಾ ಬ್ಯಾಂಕಿಗೆ ಸೇರಿದ ತನ್ನ ಖಾತೆಯ ಚೆಕ್ ನಂಬರ್ 144825 ಅನ್ನು 7,50,000/- ರೂ.ಗಳಿಗೆ, ದಿನಾಂಕಃ 20.12.2021 ರಂದು ಪಾವತಿಯಾಗುವಂತೆ ಮುಂದಿನ ದಿನಾಂಕವನ್ನು ಬರೆದು, ಸಹಿ ಮಾಡಿ, ಪಿರ್ಯಾದಿಗೆ ನೀಡಿರುತ್ತಾನೆ. ಸದರಿ ಚೆಕ್ಕನ್ನು ಪಿರ್ಯಾದಿಯು ದಿನಾಂಕಃ 24.12.2021 ರಂದು ಸಾಗರದಲ್ಲಿರುವ ಐ.ಡಿ.ಎಫ್.ಸಿ. ಬ್ಯಾಂಕ್, ಸಾಗರ ಶಾಖೆಗೆ ದಿನಾಂಕಃ 24.12.2021 ರಂದು ನಗಧೀಕರಣಕ್ಕಾಗಿ ಹಾಜರುಪಡಿಸಿದಾಗ, ಆರೋಪಿತನ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂಬ ಹಿಂಬರಹದೊಂದಿಗೆ ಆರೋಪಿತನು ನೀಡಿದ ಚೆಕ್ಕನ್ನು ಅನಾಧರಣೆಗೊಳಿಸಿ, ಬ್ಯಾಂಕಿನ ಅಧಿಕಾರಿಗಳು ದಿನಾಂಕಃ 27.12.2021 ರಂದು ಹಿಂಬರಹವನ್ನು ನೀಡಿರುತ್ತಾರೆ. ತದನಂತರ, ಪಿರ್ಯಾದಿಯು ದಿನಾಂಕಃ

30.12.2021 ರಂದು ಆರೋಪಿತನಿಗೆ ತನ್ನ ವಕೀಲರಿಂದ ಚೆಕ್ಕಿನ ಹಣವನ್ನು ವಾಪಸ್ಸು ಕೊಡುವಂತೆ ಮತ್ತು ಸದರಿ ಆರೋಪಿತನು ನೀಡಿದ ಚೆಕ್ಕು ಅನಾಧರಣೆಗೊಂಡಿರುವ ಕುರಿತು ಮಾಹಿತಿಯನ್ನು ನೀಡಿ, ಲೀಗಲ್ ನೋಟೀಸ್ ಅನ್ನು ನೀಡಿರುತ್ತಾರೆ. ಸದರಿ ನೋಟೀಸ್ ಅನ್ನು ಆರೋಪಿತನು ದಿನಾಂಕಃ 06.01.2022 ರಂದು ಉದ್ದೇಶಪೂರ್ವಕವಾಗಿ ತಿರಸ್ಕರಿಸಿರುತ್ತಾನೆ. ಅಲ್ಲದೇ, ಸದರಿ ಆರೋಪಿತನು ಪಿರ್ಯಾದಿಯಿಂದ ಪಡೆದ ಸಾಲದ ಹಣವನ್ನು ಮರುಪಾವತಿ ಮಾಡಿರುವುದಿಲ್ಲ. ಆದ್ದರಿಂದ, ಆರೋಪಿತನ ವಿರುದ್ಧ ಲಿಖಿತ ಪತ್ರಗಳ ವರ್ಗಾವಣೆ ಕಾಯಿದೆಯ ಕಲಂ 138 ರ ಅಡಿಯಲ್ಲಿ ಕ್ರಮ ತೆಗೆದುಕೊಳ್ಳುವಂತೆ ಪ್ರಸ್ತುತ ದೂರನ್ನು ಪಿರ್ಯಾದಿಯು ಸಲ್ಲಿಸಿರುತ್ತಾರೆ.

3. ನ್ಯಾಯಾಲಯವು ಲಿಖಿತ ಪತ್ರಗಳ ವರ್ಗಾವಣೆ ಕಾಯಿದೆಯ ಅಡಿಯಲ್ಲಿನ ಆರೋಪಿ ವಿರುದ್ಧ ಅಪರಾಧಿಸಿರುವ ಅಪರಾಧಕ್ಕೆ ಸಂಜ್ಞೆಯನ್ನು ತೆಗೆದುಕೊಂಡ ನಂತರ, ಆರೋಪಿತನಿಗೆ ಸಮನ್ಸ್ ಅನ್ನು ನೀಡಿರುತ್ತದೆ. ಸಮನ್ಸ್ ಜಾರಿಯಾದ ನಂತರ, ಆರೋಪಿತನು ತನ್ನ ವಕೀಲರ ಮೂಲಕ ನ್ಯಾಯಾಲಯದ ಮುಂದೆ ಹಾಜರಾಗಿ ಜಾಮೀನನ್ನು ಪಡೆದುಕೊಂಡಿರುತ್ತಾನೆ. ಲಿಖಿತ ಪತ್ರಗಳ ವರ್ಗಾವಣೆ ಕಾಯ್ದೆಯ ಕಲಂ 138 ರ ಅಡಿಯಲ್ಲಿನ ಆರೋಪಿಸಿರುವ ಅಪರಾಧಕ್ಕಾಗಿ ಆರೋಪಿನಿಗೆ ತನ್ನ ತಪ್ಪಿನ ವಾದವನ್ನು ಅವನಿಗೆ ತಿಳಿಯುವ ಭಾಷೆಯಲ್ಲಿ ಓದಿ ವಿವರಿಸಲಾಯಿತು. ಆರೋಪಿತನು ಸದರಿ ತಪ್ಪಿನ ವಾದವನ್ನು ನಿರಾಕರಿಸಿ,

ವಿಚಾರಣೆ ಆಗಲಿ ಎಂದು ಕೇಳಿಕೊಂಡ ಮೇರೆಗೆ, ಪ್ರಕರಣವನ್ನು ವಿಚಾರಣೆಗೆ ಮುಂದೂಡಲಾಯಿತು.

4. ಪಿರ್ಯಾಧಿಯು ತನ್ನ ದೂರಿನಲ್ಲಿ ಹೇಳಿರುವ ಸಂಗತಿಗಳನ್ನು ನಿರೂಪಿಸುವ ಸಲುವಾಗಿ, ತನ್ನನ್ನು ತಾನು ಪಿ.ಡಬ್ಲ್ಯೂ-1 ಎಂದು ವಿಚಾರಣೆಗೆ ಒಳಪಡಿಸಿಕೊಂಡು, ತನ್ನ ಮುಖ್ಯ ವಿಚಾರಣೆಯ ಸಲುವಾಗಿ ಶಪಥ ಪತ್ರವನ್ನು ಸಲ್ಲಿಸಿ, ಸದರಿ ಶಪಥ ಪತ್ರದಲ್ಲಿ, ದೂರಿನಲ್ಲಿ ಹೇಳಿರುವ ಎಲ್ಲಾ ಸಂಗತಿಗಳನ್ನು ಪುನರುಚ್ಚರಿಸಿರುತ್ತಾರೆ. ಸದರಿ ಪಿ.ಡಬ್ಲ್ಯೂ-1 ರವರು ತಮ್ಮ ಮೌಖಿಕ ಸಾಕ್ಷ್ಯದ ಸಮರ್ಥನೆಗೆ, ಪೂರಕವಾಗಿ ನಿ.ಪಿ.1 ರಿಂದ 9 ರವರೆಗಿನ ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ. ಸದರಿ ಪಿರ್ಯಾದಿಯು ತನ್ನ ಪರವಾಗಿ ಇತರೆ ಸಾಕ್ಷಿದಾರರನ್ನು ವಿಚಾರಣೆಗೆ ಒಳಪಡಿಸಿಕೊಂಡಿರುವುದಿಲ್ಲ.

5. ಫಿರ್ಯಾದುದಾರರ ಪರ ಸಾಕ್ಷ್ಯ ವಿಚಾರಣೆಯು ಮುಗಿದ ನಂತರ, ಆರೋಪಿತನನ್ನು ದಂಡ ಪ್ರಕ್ರಿಯಾ ಸಂಹಿತೆಯ ಕಲಂ.313 ರ ಅಡಿಯಲ್ಲಿ ವಿಚಾರಣೆ ಮಾಡಿ, ಅವರ ಹೇಳಿಕೆಯನ್ನು ಅಭಿಲೇಖಿಸಲಾಯಿತು. ಆರೋಪಿಯು ಸದರಿ ಹೇಳಿಕೆಯಲ್ಲಿ ತನ್ನ ವಿರುದ್ಧ ಪಿ.ಡಬ್ಲ್ಯೂ-1 ರವರು ನೀಡಿದ ಎಲ್ಲಾ ಹೇಳಿಕೆಗಳನ್ನು ನಿರ್ದಿಷ್ಟವಾಗಿ ಅಲ್ಲಗಳೆದಿರುತ್ತಾರೆ. ಆದರೆ, ತನ್ನ ಪರವಾಗಿ ಯಾವುದೇ ಪ್ರತಿರಕ್ಷಾ ಸಾಕ್ಷ್ಯವನ್ನು ಮಾಡಿಕೊಂಡಿರುವುದಿಲ್ಲ.

6. ಪಿರ್ಯಾದಿಯ ಪರ ವಕೀಲರ ವಾದವನ್ನು ಆಲಿಸಲಾಯಿತು ಮತ್ತು ಕಡತದಲ್ಲಿರುವ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲನೆ ಮಾಡಲಾಯಿತು. ನ್ಯಾಯಾಲಯದ ಪರಿಗಣನೆಗೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತವೆ.

ಅಂಶಗಳು

1. ಆರೋಪಿಯು ಫಿರ್ಯಾದಿಗೆ ಕಾನೂನಾತ್ಮಕವಾಗಿ ಪಾವತಿಸಬೇಕಾದ ಹಣಕ್ಕಾಗಿ, ತನ್ನ ಖಾತೆ ಹೊಂದಿರುವ ಕೆನರಾ ಬ್ಯಾಂಕ್, ಸಾಗರ ಶಾಖೆಯ ಚೆಕ್ ನಂಬರ್ 144825 ಅನ್ನು ದಿನಾಂಕಃ 20.12.2021 ಎಂದು ಮುಂದಿನ ದಿನಾಂಕವನ್ನು ನಮೂದಿಸಿ, 7,50,000/- ರೂ. ಗಳು ಎಂದು ಬರೆದು, ಸದರಿ ಚೆಕ್ಕನ್ನು ಪಿರ್ಯಾದುದಾರರ ಪರವಾಗಿ ನೀಡಿರುತ್ತಾನೆಯೇ?

2. ಸದರಿ ಚೆಕ್ಕನ್ನು ಫಿರ್ಯಾದಿಯು ತನ್ನ ಖಾತೆ ಹೊಂದಿರುವ ಐ.ಡಿ.ಎಫ್.ಸಿ. ಬ್ಯಾಂಕ್, ಸಾಗರ ಶಾಖೆಗೆ ನಗದೀಕರಿಸಿಕೊಳ್ಳಲು ಹಾಜರುಪಡಿಸಿದಾಗ, ಸದರಿ ಚೆಕ್ಕು ***"Funds insufficient"*** ಎಂಬ ಕಾರಣಕ್ಕಾಗಿ ದಿನಾಂಕಃ 27.12.2021 ರಂದು ಅನಾಧರಣೆಗೊಂಡಿದೆಯೇ?

3. ಫಿರ್ಯಾದಿಯು ನಿಗಧಿತ ಕಾಲಾವಧಿಯಲ್ಲಿ ಆರೋಪಿತನಿಗೆ ನೋಟೀಸನ್ನು ನೀಡಿ, ಚೆಕ್ಕಿನಲ್ಲಿ ಒಳಗೊಂಡಿರುವ ಹಣವನ್ನು ಪಾವತಿಸುವಂತೆ ಕೇಳಿಕೊಂಡಿದ್ದಾರೆಯೇ?

4. ಸದರಿ ನೋಟೀಸನ್ನು ಆರೋಪಿಗೆ ನೀಡಿದ ನಂತರವೂ ಸಹ, ಆರೋಪಿತನು ಚೆಕ್ಕಿನ ಹಣವನ್ನು ನಿಗದಿತ ಅವಧಿಯಲ್ಲಿ ಪಾವತಿಸದೆ ಇರುವ ಕಾರಣ, ಆರೋಪಿಯು ಲಿಖಿತ ಪತ್ರಗಳ ವರ್ಗಾವಣೆ ಕಾಯ್ದೆಯ ಕಲಂ 138 ರ ಅಡಿಯಲ್ಲಿ ಅಪರಾಧವನ್ನು ಎಸಗಿದ್ದಾರೆಯೇ?

5. ಯಾವ ಆದೇಶ?

7. ಮೇಲಿನ ಅಂಶಗಳಿಗೆ ನ್ಯಾಯಾಲಯದ ಉತ್ತರವು ಈ ಕೆಳಕಂಡಂತೆ ಇರುತ್ತದೆ.

ಅಂಶ. 1 : ***ಸಕಾರಾತ್ಮಕವಾಗಿ***
ಅಂಶ. 2 : ***ಸಕಾರಾತ್ಮಕವಾಗಿ***
ಅಂಶ. 3 : ***ಸಕಾರಾತ್ಮಕವಾಗಿ***
ಅಂಶ. 4 : ***ಸಕಾರಾತ್ಮಕವಾಗಿ***
ಅಂಶ.5 : ಈ ಕೆಳಕಂಡ ಕಾರಣಗಳಿಂದಾಗಿ ಅಂತಿಮ ಆದೇಶದಂತೆ –

ಕಾ ರ ಣ ಗ ಳು

8. **ಅಂಶ–1 ರಿಂದ 4:–** ಈ ನಾಲ್ಕು ಅಂಶಗಳ ಮೇಲಿನ ಚರ್ಚೆಯು ಒಂದರ ಮೇಲೆ ಇನ್ನೊಂದು ಅವಲಂಬಿತವಾಗಿರುವುದರಿಂದ ಮತ್ತು ಪ್ರಕರಣದ ವಸ್ತುಸ್ಥಿತಿಗಳ ಮತ್ತು ವಾಕ್ಯಗಳ ಪುನರಾವರ್ತನೆಯನ್ನು ತಪ್ಪಿಸುವುದಕ್ಕಾಗಿ, ಈ ಎಲ್ಲಾ ಅಂಶಗಳನ್ನು ಏಕಕಾಲಕ್ಕೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

ಆರೋಪಿ ಮತ್ತು ಪಿರ್ಯಾದುದಾರರು ಪರಸ್ಪರ ಪರಿಚಯಸ್ಥರಾಗಿದ್ದು, ಸದರಿ ಆರೋಪಿತನು ತನಗೆ ಗೃಹ ನಿರ್ಮಾಣದ ಸಂಬಂಧ ತುರ್ತು ಹಣದ ಅವಶ್ಯಕತೆ

ಇದೆ ಎಂದು ಹೇಳಿ, 7,50,000/- ರೂ.ಗಳನ್ನು ನಗದಾಗಿ ದಿನಾಂಕಃ 16.02.2021 ರಂದು ಸಾಲವನ್ನು ಪಡೆದಿದ್ದು, ಸದರಿ ಹಣವನ್ನು 6 ತಿಂಗಳೊಳಗಾಗಿ ಮರುಪಾವತಿ ಮಾಡುವುದಾಗಿ ಒಪ್ಪಿಕೊಂಡಿರುತ್ತಾರೆ. ತದನಂತರ, ಸದರಿ ಹಣವನ್ನು ಮರುಪಾವತಿ ಮಾಡುವಂತೆ ಪಿರ್ಯಾದಿಯು ಆರೋಪಿತನನ್ನು ಕೇಳಿದಾಗ, ಆರೋಪಿತನು ಇನ್ನೂ ಎರಡು ತಿಂಗಳ ಸಮಯಾವಕಾಶ ಬೇಕೆಂದು ಕೇಳಿಕೊಂಡು ನಂತರ, 7,50,000/- ರೂ.ಗಳಿಗೆ ದಿನಾಂಕಃ 20.12.2021 ಎಂದು ಮುಂದಿನ ದಿನಾಂಕವನ್ನು ನಮೂದಿಸಿ, 2021 ಸೆಪ್ಟೆಂಬರ್ ತಿಂಗಳ ಮೊದಲ ವಾರದಲ್ಲಿ ಕೆನರಾ ಬ್ಯಾಂಕ್, ಸಾಗರ ಶಾಖೆಗೆ ಸೇರಿದ ತನ್ನ ಚೆಕ್ ನಂಬರ್ 144825 ಅನ್ನು ಪಿರ್ಯಾದಿ ಪರವಾಗಿ ನೀಡಿರುತ್ತಾರೆ. ಸದರಿ ಚೆಕ್ಕನ್ನು ನಗಧೀಕರಣಕ್ಕಾಗಿ ಪಿರ್ಯಾದಿಯು ತನ್ನ ಖಾತೆ ಹೊಂದಿರುವ ಐ.ಡಿ.ಎಫ್.ಸಿ. ಬ್ಯಾಂಕ್, ಸಾಗರ ಶಾಖೆಗೆ ಹಾಜರುಪಡಿಸಿದಾಗ, ಸದರಿ ಚೆಕ್ಕು ಆರೋಪಿತನ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲವೆಂದು ನಗಧೀಕರಣಗೊಳ್ಳದೇ ದಿನಾಂಕಃ 27.12.2021 ರಂದು ಅನಾಧರಣೆಗೊಂಡಿರುತ್ತದೆ. ಈ ಕುರಿತು ಪಿರ್ಯಾದಿಯು ಆರೋಪಿತನಿಗೆ ದಿನಾಂಕಃ 30.12.2021 ರಂದು ನೋಟೀಸ್ ಅನ್ನು ನೀಡಿ, ಚೆಕ್ಕಿನ ಹಣವನ್ನು ಮರುಪಾವತಿ ಮಾಡುವಂತೆ ಒತ್ತಾಯಪಡಿಸಿದ್ದು, ಸದರಿ ನೋಟೀಸು ಆರೋಪಿತನಿಗೆ ಜಾರಿ ಮಾಡಲು ಹೋದಾಗ, ದಿನಾಂಕಃ 06.01.2022

ರಂದು ಅದನ್ನು ಆರೋಪಿಯ ತಿರಸ್ಕರಿಸಿದ್ದಾನೆಂಬುದನ್ನು ಅಂಚೆ ಅಧಿಕಾರಿಗಳು ದಿನಾಂಕಃ 10.01.2022 ರಂದು ಹಿಂಬರಹ ನೀಡಿರುತ್ತಾರೆ. ತದನಂತರವೂ ಸಹ ಆರೋಪಿತನು ಚೆಕ್ಕಿನ ಹಣವನ್ನು ಮರುಪಾವತಿ ಮಾಡಿರುವುದಿಲ್ಲ ಎಂಬುದಾಗಿ ತನ್ನ ದೂರಿಗೆ ಅನುಗುಣವಾಗಿ ಪ್ರಮಾಣ ಪೂರ್ವಕವಾಗಿ ಹೇಳಿಕೆಯನ್ನು ನೀಡಿರುತ್ತಾರೆ. ಆದರೆ, ದೂರಿನಲ್ಲಿ ಹೇಳಿದ ಸಂಗತಿಗಳನ್ನು ಮತ್ತು ನಿ.ಪಿ.1 ರಿಂದ 9 ರ ದಾಖಲೆಗಳನ್ನು ಆರೋಪಿತನು ನಿರ್ದಿಷ್ಟವಾಗಿ ಅಲ್ಲಗಳೆದಿರುತ್ತಾನೆ.

10. ಪಿರ್ಯಾದಿ ಪರ ವಕೀಲರು ತಮ್ಮ ವಾದ ಮಂಡನೆಯಲ್ಲಿ ಆರೋಪಿತನು ತನ್ನ ಗೃಹ ನಿರ್ಮಾಣದ ಸಲುವಾಗಿ ತನಗೆ ತುರ್ತು ಹಣದ ಅಗತ್ಯವಿದೆ ಎಂಬುದಾಗಿ ಹೇಳಿ 7,50,000/- ರೂ. ಗಳನ್ನು ದಿನಾಂಕಃ 16.02.2021 ರಂದು ಪಿರ್ಯಾದಿಯಿಂದ ಆರೋಪಿತನು ಆರು ತಿಂಗಳೊಳಗಾಗಿ ಮರುಪಾವತಿ ಮಾಡಲು ಒಪ್ಪಿ ಸಾಲವಾಗಿ ಪಡೆದುಕೊಂಡಿರುತ್ತಾನೆ. ತದನಂತರ, ನಿಗದಿತ ಅವಧಿಯಲ್ಲಿ ಸದರಿ ಹಣವನ್ನು ಆರೋಪಿತನು ಮರುಪಾವತಿ ಮಾಡದೇ 2021 ರ ಸೆಪ್ಟಂಬರ್ ತಿಂಗಳಿನಲ್ಲಿ ನಿ.ಪಿ.1 ರ ಚೆಕ್ಕನ್ನು 7,50,000/- ರೂ.ಗಳ ಹಣದ ಮರುಪಾವತಿಯ ಬಾಬ್ತು ನೀಡಿದ್ದು, ಸದರಿ ನಿ.ಪಿ.1 ರ ಚೆಕ್ಕು ನಿ.ಪಿ.2 ರಂತೆ ಆರೋಪಿತನ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂಬುದಾಗಿ ಅನಾಧರಣೆಗೊಂಡಿರುತ್ತದೆ. ಸದರಿ ಸಂಗತಿಯನ್ನು ಆರೋಪಿತನಿಗೆ

ಪಿರ್ಯಾದಿಯು ನಿ.ಪಿ.3 ರ ನೋಟೀಸಿನ ಮೂಲಕ ತಿಳಿಸಲು ಪ್ರಯತ್ನಿಸಿದಾಗ, ಸದರಿ ನೋಟೀಸ್ ಅನ್ನು ಆರೋಪಿತನು ತೆಗೆದುಕೊಳ್ಳದೇ (unclaimed) ನಿರಾಕರಿಸಿರುವುದು ನಿ.ಪಿ.5 ರಿಂದ ಸ್ಪಷ್ಟವಾಗಿ ಕಂಡು ಬಂದಿರುತ್ತದೆ.

11. ಅಲ್ಲದೇ ಸದರಿ ಹಣದ ಮರುಪಾವತಿಯಿಂದ ತಪ್ಪಿಸಿಕೊಳ್ಳಲು ತನ್ನ ವಿರುದ್ಧ ಆರೋಪಿತನು ನಿ.ಪಿ.6 ರಂತೆ ದೂರನ್ನು ದಾಖಲು ಮಾಡಿರುತ್ತಾನೆ. ಸದರಿ ದೂರನ್ನು ನ್ಯಾಯಾಲಯವು ವಜಾಗೊಳಿಸಿ, ಈ ಪ್ರಕರಣದ ಪಿರ್ಯಾದಿದಾರರನ್ನು ನಿ.ಪಿ.6 ರಲ್ಲಿ ಕಾಣಿಸಿದ ಆರೋಪಗಳಿಂದ ನ್ಯಾಯಾಲಯವು ವಿಮೋಚನೆಗೊಳಿಸಿರುತ್ತದೆ. ಅಲ್ಲದೇ ಸದರಿ ಆರೋಪಿತನು ನಿ.ಪಿ.3 ರ ನೋಟೀಸಿಗೆ ಯಾವುದೇ ಉತ್ತರವನ್ನು ನೀಡಿರುವುದಿಲ್ಲ. ಅಲ್ಲದೇ, ಪಿ.ಡಬ್ಲ್ಯೂ-1 ರವರನ್ನು ಭಾಗಶಃ ಪಾಟೀ ಸವಾಲಿಗೆ ಒಳಪಡಿಸಿದ್ದು, ಸದರಿ ಪಿರ್ಯಾದುದಾರರಿಗೆ ನಿ.ಪಿ.1 ಚೆಕ್ಕನ್ನು ನೀಡಿದ್ದನ್ನು ಹಾಗೂ ಚೆಕ್ಕಿನಲ್ಲಿ ಕಾಣಿಸಿದ ಹಣವನ್ನು ತಾನು ಸಾಲವಾಗಿ ಪಡೆದುಕೊಂಡಿಲ್ಲ ಎಂಬ ಯಾವುದೇ ಪ್ರತಿರಕ್ಷೆಯನ್ನು ತೆಗೆದುಕೊಳ್ಳದ ಕಾರಣ, ಪಿರ್ಯಾದಿಯು ಲಿಖಿತ ಪತ್ರಗಳ ವರ್ಗಾವಣೆಯ ಕಾಯಿದೆಯಡಿಯಲ್ಲಿನ ಆರೋಪಕ್ಕಾಗಿ ಅಗತ್ಯವಿರುವ ಎಲ್ಲಾ ಅಂಶಗಳನ್ನು ಸಾಬೀತುಪಡಿಸಿರುತ್ತಾನೆ. ಆದ್ದರಿಂದ, ಆರೋಪಿತನನ್ನು ಶಿಕ್ಷೆಗೆ ಗುರಿಪಡಿಸಬೇಕೆಂದು ಮತ್ತು ಪಿರ್ಯಾದಿಗೆ ಪರಿಹಾರವನ್ನು ಸಹ ಕೊಡಿಸಬೇಕೆಂದು ಸಾಧನೆ ಮಾಡಿರುತ್ತಾರೆ.

12. ಆರೋಪಿ ಪರ ವಕೀಲರು ಆರೋಪಿತನ ಪರವಾಗಿ ವಾದ ಮಂಡನೆ ಮಾಡಲು ದಿನಾಂಕಃ **14.05.2026 ರಿಂದ 12.06.2026 ರವರೆಗೆ ನಾಲ್ಕು** ಮುದ್ದತ್ತುಗಳನ್ನು ನೀಡಿದ್ದರೂ ಸಹ, ತಮ್ಮ ಪರವಾಗಿ ವಾದ ಮಂಡನೆ ಮಾಡಿರುವುದಿಲ್ಲ. ತದನಂತರ, ದಿನಾಂಕಃ 12.06.2026 ರಂದು ಆರೋಪಿತನಿಗೆ ದಿನಾಂಕಃ 17.06.2026 ರ ಒಳಗಾಗಿ ಲಿಖಿತ ವಾದವನ್ನು ಸಲ್ಲಿಸುವಂತೆ ಸೂಚನೆ ನೀಡಿದ್ದರೂ ಸಹ, ಸದರಿ ಆರೋಪಿತನು ತಮ್ಮ ಪರವಾಗಿ ವಾದ ಮಂಡನೆ ಮಾಡಲು ಯಾವುದೇ ಪ್ರಯತ್ನವನ್ನು ಮಾಡಿರುವುದಿಲ್ಲ.

13. ಪಿರ್ಯಾದಿಯು ಲಿಖಿತ ಪತ್ರಗಳ ವರ್ಗಾವಣೆ ಕಾಯ್ದೆಯ ಕಲಂ 138 ರ ಅಡಿಯಲ್ಲಿನ ಅಪರಾಧವನ್ನು ಆರೋಪಿತನು ಮಾಡಿದ್ದಾನೆ ಎಂಬುದಾಗಿ ಆಪಾದನೆ ಮಾಡಿರುವುದರಿಂದ, ಮೊದಲನೇಯದಾಗಿ ಸದರಿ ಪಿರ್ಯಾದಿಯು ತನಗೆ ಕಾನೂನಾತ್ಮಕವಾಗಿ ಮರುಪಾವತಿ ಮಾಡಬೇಕಾದಂತಹ ಹಣವನ್ನು ನೀಡುವ ಬಾಧ್ಯತೆಯ ಸಲುವಾಗಿ ಚೆಕ್ಕನ್ನು ಆರೋಪಿತನು ನೀಡಿದ್ದಾನೆ ಎಂಬುದನ್ನು ಮತ್ತು ತದನಂತರ, ಸದರಿ ಚೆಕ್ಕು ಅನಾಧರಣೆಗೊಂಡಿದೆ ಎಂಬುದನ್ನು ಸಾಬೀತುಪಡಿಸಬೇಕಾಗುತ್ತದೆ. ಈ ಪ್ರಕರಣದಲ್ಲಿ ಪಿರ್ಯಾದಿಯು ತನ್ನನ್ನು ತಾನು ಪಿ.ಡಬ್ಲೂ.1 ಎಂದು ವಿಚಾರಣೆಗೆ ಒಳಪಡಿಸಿಕೊಂಡು ತನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿರುತ್ತಾರೆ. ಸದರಿ ಪ್ರಮಾಣ

ಪತ್ರದಲ್ಲಿ ತನ್ನ ದೂರಿನಲ್ಲಿ ಹೇಳಿದ ಎಲ್ಲಾ ಸಂಗತಿಗಳನ್ನು ಪುನರುಚ್ಚರಿಸಿ, ನಿ.ಪಿ.1 ರಿಂದ 9 ರವರೆಗಿನ ದಾಖಲೆಗಳನ್ನು ನಿಶಾನೆಗಳಾಗಿ ಗುರುತಿಸಿಕೊಂಡಿರುತ್ತಾರೆ.

14. ನಿ.ಪಿ.1ರ ದಾಖಲೆಯು ಸಾಗರ ಶಾಖೆ ಕೆನರಾ ಬ್ಯಾಂಕಿನ ಚೆಕ್ಕು ಆಗಿದ್ದು, ದಿನಾಂಕಃ 20-12-2021 ರಂದು ನಗಧೀಕರಣವಾಗುವಂತೆ ಮುಂದಿನ ದಿನಾಂಕವನ್ನು ನಮೂದು ಮಾಡಿ, ಪಿರ್ಯಾದಿಯಿಂದ ಪಡೆದುಕೊಂಡಿದ್ದ 7,50,000/- ರೂಗಳಿಗೆ ಪಿರ್ಯಾದಿಯ ಪರವಾಗಿ ಆರೋಪಿತನು ನೀಡಿದ್ದಾನೆ ಎಂಬುದಾಗಿ ಹೇಳಿದ್ದಾರೆ. ಸದರಿ ಚೆಕ್ಕಿನಲ್ಲಿರುವ ಆರೋಪಿತನ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಗಿರುತ್ತದೆ. ನಿ.ಪಿ.2 ಇದು ಸಾಗರದ ಐ.ಡಿ.ಎಫ್.ಸಿ. ಫಸ್ಟ್ ಬ್ಯಾಂಕಿನ ಅಧಿಕಾರಿಗಳು ಆರೋಪಿತನು ನೀಡಿದ ಚೆಕ್ಕು ಫಂಡ್ಸ್ ಇನ್ ಸಫಿಷಿಯಂಟ್ ಎಂಬ ಹಿಂಬರಹದೊಂದಿಗೆ ದಿನಾಂಕಃ 27-12-2021 ರಂದು ಅನಾಧರಣಗೊಂಡಿರುತ್ತದೆ. ಲಿಖಿತ ಪತ್ರಗಳ ವರ್ಗಾವಣೆ ಕಾಯ್ದೆಯ ಕಲಂ 138(ಎ) ನ ಅಡಿಯಲ್ಲಿ ಸದರಿ ನಿ.ಪಿ.1ರ ಚೆಕ್ಕನ್ನು ನಿಗಧಿತ ಕಾಲಾವಧಿಯಲ್ಲಿ ಬ್ಯಾಂಕಿಗೆ ನಗಧೀಕರಣಕ್ಕಾಗಿ ಹಾಜರುಪಡಿಸಬೇಕಾಗಿರುತ್ತದೆ. ಸದರಿ ಚೆಕ್ಕನ್ನು ದಿನಾಂಕಃ 20-12-2021 ರಂದು ಪಿರ್ಯಾದಿಯು ನಗಧೀಕರಣಕ್ಕಾಗಿ ಹಾಜರುಪಡಿಸಿರುವುದರಿಂದ, ಸದರಿ ಕಲಂ 138(ಎ) ನ ಅಡಿಯಲ್ಲಿನ ಅವಶ್ಯಕತೆಯನ್ನು ಪಿರ್ಯಾದುದಾರರು ಪೂರೈಸಿರುತ್ತಾರೆ.

15. ಸದರಿ ಕಾಯ್ದೆಯ ಕಲಂ 138(ಬಿ) ನ ಅಡಿಯಲ್ಲಿ ಚೆಕ್ಕು ಅನಾಧರಣಗೊಂಡ ಕೂಡಲೇ, 30 ದಿನಗಳ ಒಳಗಾಗಿ ಚೆಕ್ಕಿನ ಹಣವನ್ನು ಮರುಪಾವತಿ ಮಾಡುವಂತೆ ಸೂಚಿಸಿ, ಆರೋಪಿತನಿಗೆ ಪಿರ್ಯಾದಿಯು ನಿ.ಪಿ.3 ರಂತೆ ನೋಟೀಸನ್ನು ನೀಡಿದ್ದಾರೆ. ನಿ.ಪಿ.4 ಅಂಚೆ ರಶೀದಿಯಾಗಿದ್ದು, ಪಿರ್ಯಾದಿಯು ನೀಡಿದ ನೋಟೀಸು ಆರೋಪಿತನಿಗೆ ಜಾರಿ ಮಾಡಲು ಹೋದಾಗ, ಸದರಿ ಆರೋಪಿತನು ದಿನಾಂಕಃ 06.01.2022 ರಂದು ನೋಟೀಸನ್ನು ಸ್ವೀಕರಿಸಲು ನಿರಾಕರಿಸಿದ್ದರಿಂದ, ಅಂಚೆ ಅಧಿಕಾರಿಗಳು Not claimed ಎಂಬ ಷರಾದೊಂದಿಗೆ ವಾಪಸ್ಸು ನೀಡಿರುತ್ತಾರೆ. ನಿ.ಪಿ. 5 ರಲ್ಲಿನ ತನ್ನ ವಿಳಾಸವನ್ನು ಆರೋಪಿತನು ಅಲ್ಲಗಳೆದಿರುವುದಿಲ್ಲ. ಆದ್ದರಿಂದ, ಸಾಮಾನ್ಯ ಖಂಡಗಳ ಅಧಿನಿಯಮದ ಕಲಂ 27 ರಂತೆ, ನಿ.ಪಿ.3 ರ ನೋಟೀಸು ಆರೋಪಿತನಿಗೆ ನಿ.ಪಿ. 5 ರಂತೆ ಜಾರಿಯಾಗಿದೆ ಎಂದು ಭಾವಿಸಬೇಕಾಗುತ್ತದೆ.

16. ನಿ.ಪಿ. 5 ರಂತೆ ನೋಟೀಸಿನ ಸಂಗತಿಯು ಹಾಗೂ ನಿ.ಪಿ. 1 ರ ಚೆಕ್ಕು ಅನಾಧರಣಗೊಂಡಿರುವ ಬಗ್ಗೆ ಆರೋಪಿತನಿಗೆ ಪಿರ್ಯಾದಿಯು ನಿಯಾಮಾನುಸಾರ ತಿಳಿಸಿದ್ದರೂ ಸಹ, ಸದರಿ ನೋಟೀಸಿಗೆ ಆರೋಪಿತನು ಉತ್ತರವನ್ನು ನೀಡಿರುವುದಿಲ್ಲ. ಅಲ್ಲದೇ, ನಿ.ಪಿ.3 ರಲ್ಲಿ ಸೂಚಿಸಿದಂತೆ ನಿಗದಿತ ಅವಧಿಯಲ್ಲಿ ಆರೋಪಿತನು ಚೆಕ್ಕಿನ ಹಣವನ್ನು ಪಿರ್ಯಾದಿಗೆ ಮರುಪಾವತಿ ಮಾಡಿರುವುದಿಲ್ಲ. ಆದ್ದರಿಂದ, ಸದರಿ ನೋಟೀಸನ್ನು ನೀಡಿದ ನಂತರ, ನಿಗದಿತ

ಕಾಲಾವಧಿಯಲ್ಲಿ ಪಿರ್ಯಾದಿಯು ಪ್ರಸ್ತುತ ದೂರನ್ನು ನ್ಯಾಯಾಲಯದಲ್ಲಿ ಸಲ್ಲಿಸಿರುತ್ತಾನೆ. ಆದ್ದರಿಂದ, ಸದರಿ ಪಿರ್ಯಾದಿಯು ಲಿಖಿತ ಪತ್ರಗಳ ವರ್ಗಾವಣೆಯ ಕಾಯ್ದೆಯ ಕಲಂ 138 ರ ಅಡಿಯಲ್ಲಿನ ಎಲ್ಲಾ ಅಗತ್ಯತೆಗಳನ್ನು ಪೂರೈಸಿರುವುದರಿಂದ ಮತ್ತು ಸದರಿ ದೂರನ್ನು ಕಾಯ್ದೆಯು ಅಗತ್ಯಪಡಿಸಿದಂತೆ ಹಾಜರುಪಡಿಸಿಲ್ಲ ಎಂಬುದಾಗಿ ಆರೋಪಿತನು ಯಾವುದೇ ಪ್ರತಿರಕ್ಷೆಯನ್ನು ತೆಗದುಕೊಳ್ಳದೇ ಇರುವುದರಿಂದ, ಹಾಗೂ ಸದರಿ ಕಾಯ್ದೆಯ ಕಲಂ 139 ಮತ್ತು 118(ಎ)ನಂತೆ ಪ್ರತಿಯೊಂದು ಲಿಖಿತ ಪತ್ರವು ಪ್ರತಿಫಲಕ್ಕಾಗಿ ನೀಡಿರುತ್ತಾರೆ ಎಂಬುದಾಗಿ ಪೂರ್ವಭಾವನೆ ಮಾಡಬಹುದಾಗಿರುವುದರಿಂದ, ಈ ಪ್ರಕರಣದಲ್ಲಿಯೂ ಸಹ ಪಿರ್ಯಾದಿಯ ಪರವಾಗಿ ಪೂರ್ವಭಾವನೆಯನ್ನು ಮಾಡಬಹುದಾಗಿರುತ್ತದೆ.

17. ಈ ಪ್ರಕರಣದಲ್ಲಿ ಪಿ.ಡಬ್ಲ್ಯೂ-1 ರವರು ತನ್ನ ಮೌಖಿಕ ಸಾಕ್ಷ್ಯದ ಸಮರ್ಥನೆಗೆ ಪೂರಕವಾಗಿ ಹಾಜರುಪಡಿಸಿರುವ ನಿ.ಪಿ.1 ರ ಚೆಕ್ಕು, ನಿ.ಪಿ.2 ರಂತೆ, ಆರೋಪಿತನ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂಬ ಕಾರಣಕ್ಕಾಗಿ ಅನಾಧರಣೆಗೊಂಡಿರುತ್ತದೆಯೇ ಹೊರತು, ಇತರೆ ಯಾವುದೇ ಕಾರಣಕ್ಕಾಗಿ ಅಲ್ಲ. ನಿ.ಪಿ.1 ರ ಚೆಕ್ಕಿನಲ್ಲಿನ ಸಹಿಯು ಬ್ಯಾಂಕಿನಲ್ಲಿ ಆರೋಪಿತನು ನೀಡಿದ ಮಾದರಿ ಸಹಿಗೆ ತಾಳೆಯಾಗುವುದಿಲ್ಲ ಎಂಬ ಕಾರಣಕ್ಕಾಗಿ, ನಿ.ಪಿ.1 ರ ಚೆಕ್ಕು ಅನಾಧರಣೆಗೊಳ್ಳದೆ ಇರುವುದರಿಂದ, ಸದರಿ ನಿ.ಪಿ.1 ರಲ್ಲಿನ ಆರೋಪಿತನ

ಸಹಿಯ ಕುರಿತು ಸ್ಪಷ್ಟ ಅಭಿಪ್ರಾಯವನ್ನು ನೀಡಲು ಬ್ಯಾಂಕಿನ ಅಧಿಕಾರಿಗಳು ಸಕ್ಷಮರಾಗಿರುತ್ತಾರೆ. ಆದ್ದರಿಂದ, ನಿ.ಪಿ.1 ರ ಚೆಕ್ಕು ಹಾಗೂ ಸದರಿ ಚೆಕ್ಕಿನಲ್ಲಿನ ಸಹಿಯು ಆರೋಪಿತನದ್ದೆ ಎಂಬುದು ಸಾಬೀತಾಗಿರುತ್ತದೆ. ನಿ.ಪಿ.3 ಮತ್ತು 4 ರಂತೆ ಆರೋಪಿತನಿಗೆ ನಿ.ಪಿ.1 ರ ಚೆಕ್ಕು, ನಿ.ಪಿ.2 ರ ಹಿಂಬರಹದ ಅನುಸಾರ ಅನಾಧರಣಗೊಂಡಿರುವ ವಿಷಯವನ್ನು, ನಿ.ಪಿ.3 ರ ಲೀಗಲ್ ನೋಟೀಸ್ ಅನ್ನು ನೀಡುವ ಮೂಲಕ ಪಿರ್ಯಾದಿಯು ಆರೋಪಿತನಿಗೆ ತಿಳಿಸಿರುತ್ತಾರೆ.

18. ಸದರಿ ನಿ.ಪಿ.3 ರ ನೋಟೀಸಿನಲ್ಲಿ ಸೂಚಿಸಿದಂತೆ ಆರೋಪಿತನು ನೋಟೀಸು ತಲುಪಿದ ಹದಿನೈದು ದಿನಗಳೊಳಗಾಗಿ ನಿ.ಪಿ.1 ರಲ್ಲಿ ಕಾಣಿಸಿದ ಮೊತ್ತವನ್ನು ಮರುಪಾವತಿ ಮಾಡಬೇಕಾಗಿರುತ್ತದೆ. ಆದರೆ, ನಿ.ಪಿ.5 ರ ಅಂಚೆ ಲಕೋಟೆಯನ್ನು ಗಮನಿಸಿದಾಗ, ಸದರಿ ಆರೋಪಿತನು ನಿ.ಪಿ. 3 ರಂತೆ ಪಿರ್ಯಾದಿಯು ನೀಡಿದ ನೋಟೀಸನ್ನು ಸ್ವೀಕರಿಸಲು ನಿರಾಕರಿಸಿರುತ್ತಾರೆ. ಆದಕಾರಣ, ಸದರಿ ನೋಟೀಸು ಜಾರಿಯಾಗದೇ ವಾಪಸ್ಸಾಗಿರುತ್ತದೆ. ನಿ.ಪಿ.1 ರಿಂದ 5 ನೇ ದಾಖಲೆಗಳನ್ನು ಗಮನಿಸಿದಾಗ, ಆರೋಪಿತನು ಉದ್ದೇಶಪೂರ್ವಕವಾಗಿ ನಿ.ಪಿ.1 ರಲ್ಲಿನ ಚೆಕ್ಕಿನ ಹಣವನ್ನು ಪಿರ್ಯಾದಿಗೆ ಮರುಪಾವತಿ ಮಾಡುವ ಬಾಧ್ಯತೆಯಿಂದ ತಪ್ಪಿಸಿಕೊಳ್ಳಲು ನಿ.ಪಿ.5 ರಂತೆ ನಿಪಿ.3 ರ ನೋಟೀಸ ಅನ್ನು ತಿರಸ್ಕರಿಸಿರುತ್ತಾನೆಂದು ಕಂಡುಬರುತ್ತದೆ. ಆರೋಪಿತನು ಪಿ.ಡಬ್ಲ್ಯೂ-1 ರವರ ಪಾಟೀ ಸವಾಲಿನಲ್ಲಿಯೂ ಸಹ, ನಿ.ಪಿ.1 ರ ಚೆಕ್ಕನ್ನು ತಾನು

ಪಿರ್ಯಾದಿಯಿಂದ ಪಡೆದ ಸಾಲದ ಹಣದ ಮರುಪಾವತಿ ಬಾಬ್ತು ನೀಡಿಲ್ಲ ಎಂಬುದಾಗಿ ಯಾವುದೇ ಪ್ರತಿರಕ್ಷೆಯನ್ನು ತೆಗೆದುಕೊಂಡಿರುವುದಿಲ್ಲ. ಅಲ್ಲದೇ, ಆರೋಪಿತನು ಪಿ.ಡಬ್ಲ್ಯೂ-1 ರವರನ್ನು ಸುಮಾರು ನಾಲ್ಕುವರೆ ಪುಟಗಳಷ್ಟು ಸುದೀರ್ಘವಾದ ಪಾಟೀ ಸವಾಲಿಗೆ ಒಳಪಡಿಸಿದ್ದರೂ ಸಹ ಸದರಿ ಪಾಟೀ ಸವಾಲಿನಲ್ಲಿ ಪಿರ್ಯಾದಿಯಿಂದ ಸಾಲವನ್ನು ಪಡೆದಿರುವ ಸಂಗತಿಯನ್ನು ಸಹ ಅಲ್ಲಗಳೆದಿರುವುದಿಲ್ಲ.

19. ಈ ಸಂದರ್ಭದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ನಿರ್ಧರಿತ ಪ್ರಕರಣವಾದ 2013 AIR (Criminal 96), 2013 (3) SCC 86: 2013 (81) ACrC483 ಪ್ರಕರಣದಲ್ಲಿ,

> **"drawer of the dishonored cheque having once admitted his signature on the cheque- it was not available to him to deny the fact that, he had not issued cheque in favor of the complainant for once the signature on the cheque is admitted and the same had been returned on account of insufficient funds-offence U/sec.138 of N.I.Act the will clearly be held to have been made out and it was not open for the respondent**

drawer to urge that, all though the cheque had been dishonored, no offense under the act is made out.

ಮತ್ತೊಂದು ನಿರ್ಧರಿತ ಪ್ರಕರಣವಾದ Criminal Appeal No.123/2021 M/s Kalamani Tex Vs. Balsubraymaniam ನಲ್ಲಿ,

even a blank cheque leaf, voluntarily signed and handed over by the accused, which is towards some payment, would attract presumption U/sec.139 of N.I.Act in the absence of any cogent evidence to show that, the cheque was not issued in discharge of a debt.

ಹಾಗೂ

Criminal Appeal No.1269-1270/2021 between Shripathising (D) Vs. State of Jarkhand ನಲ್ಲಿ **the dishonors of cheque issued had a security can also attract an offense punishable U/sec.138 of N.I.Act.**

There cannot be a hard and fast rule that a cheque which is issued as

security can never be presented by the drawer of the cheque, the court added that such contention would arise only in a circumstances were the debt has not become recoverable and the cheque issued as security has not matured to be presented for recovery of the amount, if the due date agreed for payment of debt has not arrived. ಎಂಬುದಾಗಿ ಅಭಿಪ್ರಾಯ ಪಟ್ಟಿರುತ್ತದೆ.

ಆದ್ದರಿಂದ, ಮೇಲಿನ ನಿರ್ಧರಿತ ಪ್ರಕರಣಗಳ ಸಂಗತಿಗಳನ್ನು ಪ್ರಸ್ತುತ ಪ್ರಕರಣಕ್ಕೆ ಅನ್ವಯಿಸಿದಾಗ, ಆರೋಪಿತನು 7,50,000/- ರೂ. ಗಳನ್ನು ನಗದು ರೂಪದಲ್ಲಿ ಫಿರ್ಯಾದಿಯಿಂದ ಪಡೆದುಕೊಂಡಿದ್ದಾನೆಂದು ಕಂಡುಬಂದಿರುತ್ತದೆ. ಸದರಿ ನಿಪಿ-1 ರ ಚೆಕ್ಕನ್ನು ಮುಕ್ತ ಸಮ್ಮತಿಯಿಂದ ಫಿರ್ಯಾದಿಗೆ ನೀಡಿರುವುದನ್ನು ಒಪ್ಪಿಕೊಳ್ಳುತ್ತಾರೆ. ಸದರಿ ಆರೋಪಿತನು ನಿಪಿ-1(ಎ) ನ ತನ್ನ ಸಹಿಯನ್ನು ಅಲ್ಲಗಳೆಯುವುದಿಲ್ಲ. ಆದ್ದರಿಂದ, ಆರೋಪಿತನು ಕಾನೂನಾತ್ಮಕವಾಗಿ ಪಿರ್ಯಾದಿಗೆ ಮರುಪಾವತಿ ಮಾಡಬೇಕಾದ ಹಣದ ಮರುಪಾವತಿಗಾಗಿ, ನಿಪಿ-1 ರ ಚೆಕ್ಕನ್ನು ಮುಕ್ತ ಸಮ್ಮತಿಯಿಂದ ಫಿರ್ಯಾದಿಗೆ ನೀಡಿರುತ್ತಾನೆಂದು ನ್ಯಾಯಾಲಯವು ಪೂರ್ವಭಾವನೆಗೆ ಬಂದಿರುತ್ತದೆ.

20. ನಿ.ಪಿ. 6 ಮತ್ತು 7 ರಂತೆ ಪಿ.ಸಿ.ಆರ್ ನಂಬರ್ 130/2022 ರಂತೆ ಪಿರ್ಯಾದಿ ಮತ್ತು ಇತರರ ವಿರುದ್ಧ ಆರೋಪಿತನು ಭಾರತೀಯ ದಂಡ ಸಂಹಿತೆಯ ಕಲಂ 447, 504, 506, 420, 425, 149 ಸಹವಾಚಕ ಕಲಂ 34 ರ ಅಡಿಯಲ್ಲಿನ ಆರೋಪಗಳಿಗೆ ದೂರನ್ನು ಸಲ್ಲಿಸಿ, ಸದರಿ ದೂರಿನಲ್ಲಿ ತನ್ನ ಪ್ರಮಾಣಿಕೃತ ಹೇಳಿಕೆಯನ್ನು ನೀಡಿರುತ್ತಾರೆ. ಸದರಿ ದೂರಿನಲ್ಲಿನ ಯಾವುದೇ ಸಂಗತಿಗಳು/ಆರೋಪಗಳು ಮೇಲ್ನೋಟಕ್ಕೆ ಸಾಬೀತಾಗದ ಕಾರಣ, ಸದರಿ ಪ್ರಕರಣದಲ್ಲಿ ಈಗಾಗಲೇ ನ್ಯಾಯಾಲಯದಲ್ಲಿ ವಿಚಾರಣೆಯ ಪೂರ್ವದಲ್ಲಿಯೇ ಆರೋಪಿತರನ್ನು ಅಂದರೆ, ಈ ಪ್ರಕರಣದ ಪಿರ್ಯಾದಿ ಹಾಗೂ ಇತರರನ್ನು ವಿಮೋಚನೆಗೊಳಿಸಿ ಆದೇಶಿಸಿರುತ್ತದೆ. ನಿ.ಪಿ. 8 ಮತ್ತು 9 ರ ದಾಖಲೆಗಳು ಈ ಪ್ರಕರಣಕ್ಕೆ ಸಂಬಂಧಪಟ್ಟ ದಾಖಲೆಗಳಾಗಿರುವುದಿಲ್ಲ. ಆದ್ದರಿಂದ, ಸದರಿ ದಾಖಲೆಗಳ ಕುರಿತು ಚರ್ಚಿಸುವ ಯಾವುದೇ ಅಗತ್ಯವಿಲ್ಲ.

21. ಅತೀ ಮುಖ್ಯವಾಗಿ ಈ ಪ್ರಕರಣದಲ್ಲಿ ಗಮನಿಸಬೇಕಾದ ಪ್ರಮುಖ ಅಂಶಗಳೇನೆಂದರೆ, ಕಡತದಲ್ಲಿರುವ ದಾಖಲೆಗಳಂತೆ ದಿನಾಂಕಃ 04.02.2022 ರಂದು ಪ್ರಸ್ತುತ ಖಾಸಗಿ ದೂರನ್ನು ನ್ಯಾಯಾಲಯದ ಮುಂದೆ ಪಿರ್ಯಾದಿಯು ಹಾಜರುಪಡಿಸಿರುತ್ತಾನೆ. ನಂತರ, ನ್ಯಾಯಾಲಯವು ಪಿ.ಸಿ.ಆರ್. ನಂಬರ್ 30/2022 ರಂತೆ ಪ್ರಕರಣವನ್ನು ನೋಂದಾಯಿಸಿಕೊಂಡು, ದಿನಾಂಕಃ 07.02.2022 ರಂದು ಪಿರ್ಯಾದಿಯ ಸ್ವ-ಇಚ್ಛಾ ಹೇಳಿಕೆಯನ್ನು ದಾಖಲು

ಮಾಡಿಕೊಂಡಿರುತ್ತದೆ. ನಂತರ, ದಿನಾಂಕಃ 07.02.2022 ರಂದು ಸಿ.ಸಿ ನಂಬರ್ 20/2022 ರಂತೆ ಆರೋಪಿತನ ವಿರುದ್ಧ ಕ್ರಿಮಿನಲ್ ಪ್ರಕರಣವನ್ನು ನ್ಯಾಯಾಲಯವು ದಾಖಲಿಸಿಕೊಂಡು, ಆರೋಪಿತನ ಹಾಜರಾತಿಗಾಗಿ ಸಮನ್ಸ್ ಅನ್ನು ನೀಡಿರುತ್ತದೆ. ತದನಂತರ, ಸದರಿ ಆರೋಪಿತನು ದಿನಾಂಕಃ 23.03.2022 ರಂದು ತಮ್ಮ ವಕೀಲರ ಮೂಲಕ ಹಾಜರಾಗಿ, ದಿನಾಂಕಃ 29.03.2022 ರಂದು ನ್ಯಾಯಾಲಯದಿಂದ ಜಾಮೀನನ್ನು ಪಡೆದುಕೊಂಡಿರುತ್ತಾನೆ.

22. ತದನಂತರ, ಪಿರ್ಯಾದಿ ಪರ ಸಾಕ್ಷಿ ವಿಚಾರಣೆಯನ್ನು ನ್ಯಾಯಾಲಯವು ಮಾಡಿಕೊಂಡು, ದಿನಾಂಕಃ 31.10.2022 ರಂದು ಪಿ.ಡಬ್ಲ್ಯೂ-1 ರವರ ಪಾಟೀ ಸವಾಲಿಗಾಗಿ ಪ್ರಕರಣವನ್ನು ಮುಂದೂಡಲಾಗಿರುತ್ತದೆ. ದಿನಾಂಕಃ 24.11.2022 ರಂದು ಪಿ.ಡಬ್ಲ್ಯೂ-1 ರವರು ನ್ಯಾಯಾಲಯದ ಮುಂದೆ ಹಾಜರಾಗಿದ್ದರೂ ಸಹ, ಆರೋಪಿತನು ಪಿ.ಡಬ್ಲ್ಯೂ-1 ರವರನ್ನು ಪಾಟೀ ಸವಾಲಿಗೆ ಒಳಪಡಿಸದ ಕಾರಣ, 200/- ರೂ. ಗಳ ಖರ್ಚಿನೊಂದಿಗೆ ಪಾಟೀ ಸವಾಲನ್ನು ಮುಂದೂಡಲಾಗಿರುತ್ತದೆ. ನಂತರ, ದಿನಾಂಕಃ 19.09.2023 ರವರೆಗೆ ಒಟ್ಟು 10 ಮುದ್ದತ್ತುಗಳನ್ನು ಪಿ.ಡಬ್ಲ್ಯೂ-1 ರವರ ಪಾಟೀ ಸವಾಲಿಗಾಗಿ ನೀಡಿದ್ದರೂ ಸಹ, ಪಿ.ಡಬ್ಲ್ಯೂ-1 ರವರನ್ನು ಆರೋಪಿತನು ಪಾಟೀ ಸವಾಲಿಗೆ ಒಳಪಡಿಸಿರುವುದಿಲ್ಲ. ತದನಂತರ, ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ

ನ್ಯಾಯಾಧೀಶರ ಆದೇಶ ಸಂಖ್ಯೆ ADM/DJR No. 20299 ರ ದಿನಾಂಕಃ 13.09.2023 ರ ಆದೇಶದಂತೆ, ಈ ಪ್ರಕರಣವನ್ನು ಮಾನ್ಯ 1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಸಾಗರ ಇಲ್ಲಿಗೆ ವರ್ಗಾವಣೆ ಮಾಡಲಾಗಿರುತ್ತದೆ.

23. ನಂತರ, ಮಾನ್ಯ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಸಿ.ಸಿ. ನಂಬರ್ 1747/2023 ರಂತೆ ದಿನಾಂಕಃ 17.10.2023 ರಂದು ಪ್ರಕರಣವನ್ನು ದಾಖಲಿಸಿಕೊಂಡು, ನಂತರ ಅಲ್ಲಿಂದ **ಸುಮಾರು 19 ಮುದ್ದತ್ತುಗಳನ್ನು ದಿನಾಂಕಃ 17.10.2023 ರಿಂದ 02.09.2025 ರವರೆಗೆ ಆರೋಪಿತನು ಪಡೆದುಕೊಂಡಿದ್ದರೂ ಸಹ** ಪಿ.ಡಬ್ಲ್ಯೂ-1 ರವರನ್ನು ಪಾಟೀ ಸವಾಲಿಗೆ ಒಳಪಡಿಸಿರುವುದಿಲ್ಲ. ನಂತರ, ಪುನಃ ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಶಿವಮೊಗ್ಗ ಇವರ ADM/DJR No. 24881-82/2025 ರ ಆದೇಶದಂತೆ ಈ ಪ್ರಕರಣವನ್ನು ಪುನಃ ಈ ನ್ಯಾಯಾಲಯಕ್ಕೆ ವರ್ಗಾವಣೆ ಮಾಡಿದ್ದು, ನ್ಯಾಯಾಲಯವು ದಿನಾಂಕಃ 08.10.2025 ರಂದು ಸಿ.ಸಿ. 1672/2025 ರಂತೆ ಪ್ರಕರಣವನ್ನು ಮರು ನೋಂದಾಯಿಸಿಕೊಂಡಿರುತ್ತದೆ.

24. ತದನಂತರ, ಉಭಯ ಪಕ್ಷಗಾರರನ್ನು ಹಾಜರುಪಡಿಸಿಕೊಂಡು, ಪಿ.ಡಬ್ಲ್ಯೂ-1 ರವರ ಪಾಟೀ ಸವಾಲಿಗೆ ಪ್ರಕರಣವನ್ನು ಕಾಯ್ದಿರಿಸಲಾಗಿರುತ್ತದೆ. ತದನಂತರ,

ಆರೋಪಿತನು ದಿನಾಂಕಃ10.10.2025 ರಿಂದ 15.04.2026 ರವರೆಗೆ ಒಟ್ಟು 17 ಮುದ್ದತ್ತುಗಳನ್ನು ಪಡೆದುಕೊಂಡಿದ್ದರೂ ಸಹ, ಪಿ.ಡಬ್ಲ್ಯೂ-1 ರವರನ್ನು ಪಾಟೀ ಸವಾಲಿಗೆ ಒಳಪಡಿಸಿರುವುದಿಲ್ಲ. ಅಂತಿಮವಾಗಿ, ದಿನಾಂಕಃ 15.04.2026 ರಂದು ಪಿ.ಡಬ್ಲ್ಯೂ-1 ರವರನ್ನು ಆರೋಪಿತನು ಪಾಟೀ ಸವಾಲಿಗೆ ಒಳಪಡಿಸಿಲ್ಲವೆಂದು ತೆಗೆದುಕೊಂಡು, ಪ್ರಕರಣವನ್ನು ಮುಂದಿನ ಹಂತಕ್ಕೆ ಮುಂದೂಡಿದ ನಂತರ, ದಿನಾಂಕಃ 04.05.2026 ರಂದು ಪಿ.ಡಬ್ಲ್ಯೂ-1 ರವರನ್ನು ಪಾಟೀ ಸವಾಲು ಮಾಡಲು ಅನುಮತಿ ಕೋರಿ ಆರೋಪಿತನು ಸಲ್ಲಿಸಿದ ಅರ್ಜಿಯನ್ನು ನ್ಯಾಯಾಲಯವು 300/- ರೂ.ಗಳ ವೆಚ್ಚದೊಂದಿಗೆ ಪುರಸ್ಕರಿಸಿರುತ್ತದೆ. ಸದರಿ ದಿನಾಂಕದಂದು ಪಿ.ಡಬ್ಲ್ಯೂ-1 ರವರನ್ನು ಭಾಗಶಃ ಪಾಟೀ ಸವಾಲಿಗೆ ಒಳಪಡಿಸಿದ್ದು, ನಂತರ, ಸಾಕಷ್ಟು ಕಾಲಾವಕಾಶವನ್ನು ನೀಡಿದ್ದರೂ ಸಹ ಪಿ.ಡಬ್ಲ್ಯೂ-1 ರವರನ್ನು ಆರೋಪಿತನು ಮುಂದಿನ ಪಾಟಿ ಸವಾಲಿಗೆ ಒಳಪಡಿಸಿರುವುದಿಲ್ಲ.

25. ಸದರಿ ಪಾಟೀ ಸವಾಲಿನಲ್ಲಿ ಯಾವುದೇ ನಿರ್ದಿಷ್ಟ ಪ್ರತಿರಕ್ಷೆ ಇಲ್ಲದ ಕಾರಣ, ಆರೋಪಿತನ ಪರ ಸಾಕ್ಷಿ ಇಲ್ಲ ಎಂದು ಪರಿಗಣಿಸಿ, ದಿನಾಂಕಃ 04.05.2026 ರಂದು ವಾದ ಮಂಡನೆಗೆ ಪ್ರಕರಣವನ್ನು ಮುಂದೂಡಲಾಗಿರುತ್ತದೆ. ಪಿರ್ಯಾದಿ ಪರ ವಾದವನ್ನು ಆಲಿಸಿದ ನಂತರ, ಆರೋಪಿ ಪರ ವಾದ ಮಂಡನೆಗಾಗಿ ಪ್ರಕರಣವನ್ನು ಕಾಯ್ದಿರಿಸಿದ್ದರೂ ಸಹ, ಸದರಿ ಆರೋಪಿತನು ವಾದ ಮಂಡನೆ

ಮಾಡಿರುವುದಿಲ್ಲ. ನಂತರ, ದಿನಾಂಕಃ 12.06.2026 ರಂದು ಸದರಿ ಆರೋಪಿತನಿಗೆ ದಿನಾಂಕಃ 17.06.2026 ರ ಒಳಗಾಗಿ ತನ್ನ ಲಿಖಿತ ವಾದವನ್ನು ಸಲ್ಲಿಸುವಂತೆ ಅನುಮತಿಯನ್ನು ನೀಡಿ, ತೀರ್ಪಿಗಾಗಿ ಪ್ರಕರಣವನ್ನು ದಿನಾಂಕಃ 20.06.2026 ಕಾಯ್ದಿರಿಸಲಾಗಿರುತ್ತದೆ. ಆದಾಗಿಯೂ ಸಹ, ಸದರಿ ಆರೋಪಿತನು ಪಿ.ಡಬ್ಲ್ಯೂ-1 ರವರ ಮುಂದುವರೆದ ಪಾಟೀ ಸವಾಲಿಗೆ ಅನುಮತಿಯನ್ನು ಕೋರಿ ಅರ್ಜಿಯನ್ನು ಸಲ್ಲಿಸಿರುವುದಿಲ್ಲ ಮತ್ತು ವಾದ ಮಂಡನೆಯನ್ನು ಸಹ ಮಾಡಿರುವುದಿಲ್ಲ. ಸದರಿ ಆರೋಪಿತನ ಮೇಲಿನ ಕ್ರಮವನ್ನು ಗಮನಿಸಿದಾಗ, **ಸುಮಾರು ಮೂರುವರೆ ವರ್ಷ ಕಳೆದರೂ ಸಹ** ಪಿ.ಡಬ್ಲ್ಯೂ-1 ರವರನ್ನು ಆರೋಪಿತನು ಪಾಟೀ ಸವಾಲಿಗೆ ಒಳಪಡಿಸದೇ ವಿನಾಕಾರಣ, ಪ್ರಕರಣದ ವಿಚಾರಣೆಗೆ ತೊಂದರೆಯನ್ನುಂಟು ಮಾಡುವ ಉದ್ದೇಶದಿಂದ ಹಾಗೂ ಪ್ರಕರಣದ ವಿಚಾರಣೆಯನ್ನು ಯಾವುದೇ ಸಕಾರಣವಿಲ್ಲದೇ ಮಧ್ಯಂತರ ಅರ್ಜಿಗಳನ್ನು ಸಲ್ಲಿಸಿ, ಮುಂದೂಡುವಂತೆ ಮಾಡುತ್ತಾ ಬಂದಿರುತ್ತಾನೆ.

26. ಆದರೂ ಸಂತೃಪ್ತನಾಗದ ಆರೋಪಿತನು ಪ್ರಕರಣವನ್ನು ತೀರ್ಪಿಗಾಗಿ ಕಾಯ್ದಿರಿಸಿದ ಸಂದರ್ಭದಲ್ಲಿ, ಪ್ರಕರಣವನ್ನು ದಿನಾಂಕಃ 20.06.2026 ರಂದು ತೀರ್ಪಿಗಾಗಿ ಕಾಯ್ದಿರಿಸಿದ ಸಂದರ್ಭದಲ್ಲಿ ದಿನಾಂಕಃ 19.06.2026 ರಂದು ಆರೋಪಿ ಪರ ವಕೀಲರು ಮುಂಗಡ ಅರ್ಜಿಯನ್ನು ಸಲ್ಲಿಸಿ, ಪ್ರಕರಣವನ್ನು ಬೋರ್ಡಿನ ಮೇಲೆ

ತೆಗೆದುಕೊಳ್ಳವಂತೆ ಮನವಿ ಮಾಡಿರುತ್ತಾರೆ. ಸದರಿ ಅರ್ಜಿಯಂತೆ ದಿನಾಂಕಃ 20.06.2026 ರಂದು ಪ್ರಕರಣವನ್ನು ಬೋರ್ಡಿನ ಮೇಲೆ ತೆಗೆದುಕೊಂಡಾಗ ಆರೋಪಿ ಪರ ವಕೀಲರು ಜ್ಞಾಪನಾ ಪತ್ರದೊಂದಿಗೆ ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಶಿವಮೊಗ್ಗ ಇವರ ನ್ಯಾಯಾಲಯದ ಕ್ರಿಮಿನಲ್ ಮಿಸ್ ನಂ. 596/2026 ರ ಆನ್ ಲೈನ್ ಪ್ರತಿಯನ್ನು ಹಾಜರುಪಡಿಸಿರುತ್ತಾರೆ. ಸದರಿ ಪ್ರಕರಣದಲ್ಲಿ ದಿನಾಂಕಃ 19.06.2026 ರಿಂದ ಮುಂದಿನ 20 ದಿನಗಳವರೆಗೆ ಈ ಪ್ರಕರಣದ ಎಲ್ಲಾ ಪ್ರಕ್ರಿಯೆಗಳಿಗೆ ತಡೆಯಾಜ್ಞೆ ನೀಡಿರುತ್ತದೆ. ಆ ಕಾರಣದಿಂದ ದಿನಾಂಕಃ 20.06.2026 ರಂದು ನ್ಯಾಯಾಲಯವು ತೀರ್ಪನ್ನು ಪ್ರಕಟಿಸಿರುವುದಿಲ್ಲ.

27. ನಂತರ, ದಿನಾಂಕಃ 03.08.2026 ರಂದು ಕ್ರಿಮಿನಲ್ ಮಿಸ್ ನಂ. 596/2026 ರ ಅಂತಿಮ ಆದೇಶವನ್ನು ಪಿರ್ಯಾದಿ ಪರ ವಕೀಲರು ಜ್ಞಾಪನಾ ಪತ್ರದೊಂದಿಗೆ ಹಾಜರುಪಡಿಸಿರುತ್ತಾರೆ. ಸದರಿ ಆದೇಶವನ್ನು ಗಮನಿಸಲಾಗಿ, ಆರೋಪಿತನು ಈ ನ್ಯಾಯಾಲಯವು ಆರೋಪಿತನಿಗೆ ಸಾಕಷ್ಟು ಕಾಲಾವಕಾಶವನ್ನು ನೀಡುತ್ತಿಲ್ಲದ ಕಾರಣ, ಆರೋಪಿತನಿಗೆ ಅನುಕೂಲವಾಗುವಂತಹ ಆದೇಶಗಳು ದೊರೆಯುವುದಿಲ್ಲವಾದರಿಂದ, ಬೇರೆ ನ್ಯಾಯಾಲಯಕ್ಕೆ ಈ ಪ್ರಕರಣವನ್ನು ವರ್ಗಾವಣೆ ಮಾಡುವಂತೆ ಕೋರಿ

ಭಾರತೀಯ ನಾಗರೀಕ ಸುರಕ್ಷಾ ಸಂಹಿತೆಯ ಕಲಂ 448 ರ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಿದ್ದರು.

28. ಸದರಿ ಅರ್ಜಿಯನ್ನು ನಿರ್ಣಯಿಸುವಾಗ ಮಾನ್ಯ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶ ನ್ಯಾಯಾಲಯದ ಪ್ರಕರಣದ ಸಂಖ್ಯೆಯನ್ನು ಗಮನಿಸಿದಾಗ ಈ ಪ್ರಕರಣವು 2025 ನೇ ಸಾಲಿನ ಪ್ರಕರಣವೆಂದು ಭಾಸವಾಗುತ್ತದೆ. ಆದರೆ, ಸದರಿ ಪ್ರಕರಣವನ್ನು ದಿನಾಂಕಃ 07.02.2022 ರಂದು ದಾಖಲಿಸಿದ್ದು, ಲಿಖಿತ ಪತ್ರಗಳ ವರ್ಗಾವಣೆ ಕಾಯಿದೆಯ ಕಲಂ 138 ರ ಅಡಿಯಲ್ಲಿನ ಸಾಧಾರಣ ಪ್ರಕರಣದಲ್ಲಿ ಆರೋಪಿತನು ನಾಲ್ಕು ವರ್ಷಗಳವರೆಗೆ ವಿನಾಕಾರಣ ಮುಂದುಡುತ್ತಾ ಬಂದಿದ್ದರು. ಅವರಿಗೆ ತೃಪ್ತಿಯಾಗಿರುವುದಿಲ್ಲ. ಅಲ್ಲದೇ, ವಾಸ್ತವ ಸಂಗತಿಗಳನ್ನು ಮರೆಮಾಚಿ, ವಿಚಾರಣಾ ನ್ಯಾಯಾಲಯವು ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯದ ಆದೇಶವನ್ನು ಉಲ್ಲಂಘಿಸಿದೆ ಎಂದು ಆಧಾರರಹಿತ ಆರೋಪವನ್ನು ಮಾಡಿ ಸದರಿ ಅರ್ಜಿಯನ್ನು ಸಲ್ಲಿಸಿರುವುದರಿಂದ, ಸದರಿ ವರ್ಗಾವಣೆಯ ಅರ್ಜಿಯನ್ನು ಪುರಸ್ಕರಿಸಲು ಯಾವುದೇ ಸಕಾರಣಗಳು ಇಲ್ಲ. ಅಲ್ಲದೇ, ಆರೋಪಿತನು ಉದ್ದೇಶಪೂರ್ವಕವಾಗಿ ಪ್ರಕರಣವನ್ನು ಮುಂದುಡುತ್ತಾ ಬಂದಿದ್ದಾನೆ ಎಂಬುದಾಗಿ ಅಭಿಪ್ರಾಯವನ್ನು ವ್ಯಕ್ತಪಡಿಸಿ, ದಿನಾಂಕಃ 30.07.2026 ರಂದು ಸದರಿ ವರ್ಗಾವಣೆ ಕೋರಿ ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸಿರುತ್ತದೆ.

29. ಈ ಪ್ರಕರಣದ ಆರೋಪಿತನು ದಿನಾಂಕಃ 03.08.2026 ರಂದು ಎರಡು ಅರ್ಜಿಗಳನ್ನು ದಂಡ ಪ್ರಕ್ರಿಯಾ ಸಂಹಿತೆಯ ಕಲಂ 91 ಮತ್ತು 311 ರ ಅಡಿಯಲ್ಲಿ ಸಲ್ಲಿಸಿ, ಪ್ರತಿರಕ್ಷೆ ಸಾಕ್ಷ್ಯ ನೀಡಲು ಆರೋಪಿತನಿಗೆ ಅನುಮತಿಯನ್ನು ನೀಡಬೇಕೆಂದು ಮತ್ತು ಅರ್ಜಿಯಲ್ಲಿ ಕೋರಿದ ದಾಖಲೆಗಳನ್ನು ಹಾಜರುಪಡಿಸುವಂತೆ ಪಿರ್ಯಾದುದಾರರಿಗೆ ನಿರ್ದೇಶನವನ್ನು ನೀಡಿ, ಅವರನ್ನು ಮುಂದುವರೆದ ಪಾಟೀ ಸವಾಲಿಗೆ ಒಳಪಡಿಸಲು ಅನುಮತಿಯನ್ನು ಕೋರಿರುತ್ತಾರೆ. ಸದರಿ ಅರ್ಜಿಗಳಲ್ಲಿ ಈ ಹಿಂದೆ ತನಗೆ ನೀಡಿದ್ದ ಅವಕಾಶವನ್ನು ಆರೋಪಿತನು ಯಾಕೆ ಸದುಪಯೋಗಪಡಿಸಿಕೊಂಡಿಲ್ಲ ಎನ್ನುವ ಬಗ್ಗೆ ಯಾವುದೇ ಸಕಾರಣಗಳನ್ನು ನೀಡದೇ ಇರುವುದರಿಂದ, ಹಾಗೂ ಈಗಾಗಲೇ ಪ್ರಕರಣವನ್ನು ತೀರ್ಪಿಗಾಗಿ ಕಾಯ್ದಿರಿಸಿರುವುದರಿಂದ, ಸದರಿ ಆರೋಪಿತನು ಸಲ್ಲಿಸಿದ ಅರ್ಜಿಗಳನ್ನು ನ್ಯಾಯಾಲಯವು ವೆಚ್ಚಗಳ ಸಹಿತ ತಿರಸ್ಕರಿಸಿರುತ್ತದೆ.

30. ಪಕ್ಷಗಾರರು ಪ್ರಕರಣದ ಶೀಘ್ರ ವಿಲೇವಾರಿ ಹಕ್ಕುಗಳನ್ನು ಹೊಂದಿದ್ದಾರೆ. ಈ ಕುರಿತು ಮಾನ್ಯ ಸರ್ವೋಚ್ಚ ನ್ಯಾಯಾಲಯವು ತನ್ನ ಅನೇಕ ನಿರ್ಧರಿತ ಪ್ರಕರಣಗಳಲ್ಲಿ ಒತ್ತಿ ಹೇಳುತ್ತಾ, ಚೆಕ್ ಬೌನ್ಸ್ ಪ್ರಕರಣಗಳನ್ನು ಶೀಘ್ರವಾಗಿ ವಿಲೇವಾರಿಗಾಗಿ ಮಾರ್ಗಸೂಚಿಗಳನ್ನು ಸಹ ಅಧೀನ ನ್ಯಾಯಾಲಯಗಳಿಗೆ ನೀಡಿರುತ್ತದೆ. ಆದರೆ, ಸದರಿ ಆರೋಪಿತನ ಕ್ರಮವನ್ನು ಗಮನಿಸಿದಾಗ, ಉದ್ದೇಶಪೂರ್ವಕವಾಗಿ ತನ್ನ ಕಾನೂನಾತ್ಮಕ ಬಾಧ್ಯತೆಯಿಂದ ತಪ್ಪಿಸಿಕೊಳ್ಳುವ

ಸಲುವಾಗಿ ಪ್ರಕರಣವನ್ನು ವಿನಾಕಾರಣ ಮುಂದುಡುತ್ತಾ ನ್ಯಾಯಾಲಯದ ಅತ್ಯಮೂಲ್ಯ ಸಮಯವನ್ನು ವ್ಯರ್ಥ ಮಾಡಿರುವುದಲ್ಲದೇ ನ್ಯಾಯಾಲಯದ ಪ್ರಕ್ರಿಯೆಯನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ. ಈ ರೀತಿಯ ಕ್ರಮವನ್ನು ಅನುಮತಿಸುವು ಸೂಕ್ತ ಹಾಗೂ ಸಮಂಜಸವಾಗಿರುವುದಿಲ್ಲ.

31. ಸದರಿ, ಆರೋಪಿತನು ತನ್ನ ಪಾಟೀ ಸವಾಲಿನಲ್ಲಿ ಯಾವುದೇ ನಿರ್ದಿಷ್ಟ ಪ್ರತಿರಕ್ಷೆಯನ್ನು ತೆಗೆದುಕೊಂಡಿರುವುದಿಲ್ಲ. ದಂಡ ಪ್ರಕ್ರಿಯಾ ಸಂಹಿತೆಯ ಕಲಂ 313 ರಡಿಯಲ್ಲಿ ಆರೋಪಿತನನ್ನು ವಿಚಾರಣೆಗೆ ಒಳಪಡಿಸಿದಾಗ, ಅವನ ವಿರುದ್ಧದ ಆರೋಪಗಳನ್ನು ನಿರಾಕರಿಸಿದ್ದಾನೆಯೇ ಹೊರತು ಯಾವುದೇ ನಿರ್ದಿಷ್ಟ ಪ್ರತಿರಕ್ಷೆಯನ್ನು ತೆಗೆದುಕೊಂಡಿರುವುದಿಲ್ಲ. ಅಲ್ಲದೇ ಸದರಿ ಆರೋಪಿತನು ತನ್ನ ಪರವಾಗಿ ಯಾವುದೇ ಪ್ರತಿರಕ್ಷಾ ಸಾಕ್ಷ್ಯವನ್ನು ಸಹ ಮಾಡಿರುವುದಿಲ್ಲ.

32. ಸದರಿ ಆರೋಪಿತನು ಪಿ.ಡಬ್ಲ್ಯೂ-1 ರವರ ಪಾಟೀ ಸವಾಲಿನಲ್ಲಿ ಅವನ ಆರ್ಥಿಕ ಸಾಮರ್ಥ್ಯದ ಕುರಿತು ಪ್ರಶ್ನಿಸಿರುತ್ತಾನೆ. ಆದರೆ, ನಿ.ಪಿ.1 ರ ಚೆಕ್ಕಿನ ಕುರಿತು ಹಾಗೂ ಸದರಿ ಚೆಕ್ಕು ಪಿರ್ಯಾದಿಯ ಸ್ವಾಧೀನಕ್ಕೆ ಹೇಗೆ ಬಂತು ಎನ್ನುವ ಬಗ್ಗೆ ಯಾವುದೇ ಪ್ರಶ್ನೆಯನ್ನು ಮಾಡಿರುವುದಿಲ್ಲ. ಮಾನ್ಯ ಸರ್ವೋಚ್ಛ ನ್ಯಾಯಾಲಯದ ನಿರ್ಧರಿತ ಪ್ರಕರಣವಾದ **2025 Live Law(SC) 383 (Ashok Singh V/s. State of Uttara Pradesh and another) ನಲ್ಲಿ,**

Complainant has no owns to prove financial capacity at the threshold. Once the drawer admits to signing the cheque the presumption U/Sec. 138 of NI Act cannot rebutted merely by questioning the complainant debt-giving capacity, especially when such defence not raised in the reply notice by the accused. ಎಂದು ಅಭಿಪ್ರಾಯಪಟ್ಟಿರುತ್ತದೆ.

ಈ ಪ್ರಕರಣದಲ್ಲಿಯೂ ಸಹ ನಿ.ಪಿ.3 ರ ನೋಟೀಸು ನಿ.ಪಿ.5 ರಂತೆ unclaimed ಎಂದು ವಾಪಾಸ್ಸಾಗಿರುತ್ತದೆ. ಸದರಿ ಆರೋಪಿತನು ಉದ್ದೇಶಪೂರ್ವಕವಾಗಿ ನೋಟೀಸಿನ ಜಾರಿಯನ್ನು ನಿರಾಕರಿಸಿರುತ್ತಾನೆ. ಅಲ್ಲದೇ, ಸದರಿ ಆರೋಪಿತನು ನಿ.ಪಿ.3 ರ ನೋಟೀಸಿಗೆ ಉತ್ತರವನ್ನು ನೀಡುವುದರ ಮೂಲಕ ಯಾವುದೇ ನಿರ್ದಿಷ್ಟ ಪ್ರತಿರಕ್ಷೆಯನ್ನು ತೆಗೆದುಕೊಂಡಿರುವುದಿಲ್ಲ. ಆದಕಾರಣ, ಪಾಟೀ ಸವಾಲಿನಲ್ಲಿ ಪಿರ್ಯಾದಿಯ ಆರ್ಥಿಕ ಸಾಮರ್ಥ್ಯದ ಕುರಿತು ಪ್ರಶ್ನಿಸಲಾಗುವುದಿಲ್ಲ. ಆದ್ದರಿಂದ, ಆರೋಪಿತನ ವಿರುದ್ಧ ಲಿಖಿತ ಪತ್ರಗಳ ಅಧಿನಿಯಮ ಕಲಂ 139 ಮತ್ತು 118 ರಂತೆ, ಫಿರ್ಯಾದಿಯ ಪರವಾಗಿ ಇರುವ ಪೂರ್ವ ಭಾವನೆಯನ್ನು ಸೂಕ್ತ ಸಾಕ್ಷ್ಯಾಧಾರಗಳ ಮೂಲಕ ಖಂಡಿಸಲು ಸಂಪೂರ್ಣವಾಗಿ ವಿಫಲರಾಗಿರುತ್ತಾರೆ. ನಿಪಿ-1 ರ ಚೆಕ್ಕನ್ನು ಆರೋಪಿಯು ಫಿರ್ಯಾದಿಯ ಪರವಾಗಿ, ತಾನು ಪಡೆದುಕೊಂಡ ಸಾಲದ ತೀರುವಳಿಗಾಗಿ ನೀಡಿದ್ದಾನೆ ಎಂದು ಮೇಲ್ನೋಟಕ್ಕೆ

ಕಂಡುಬರುತ್ತದೆ. ಆದ್ದರಿಂದ, ಆರೋಪಿತನು ಪಿರ್ಯಾದಿಗೆ ನಿಪಿ–1 ರ ಚೆಕ್ಕಿನ ಹಣವನ್ನು ಕಾನೂನು ಬದ್ಧವಾಗಿ ನೀಡುವ ಬಾಧ್ಯತೆಯನ್ನು ಹೊಂದಿರುತ್ತಾನೆಂದು ಈ ನ್ಯಾಯಾಲಯವು ಅಭಿಪ್ರಾಯಪಡುತ್ತದೆ.

33. ಮೇಲಿನ ಚರ್ಚೆಯಿಂದ ನ್ಯಾಯಾಲಯವು ಪಿರ್ಯಾದಿಯು ತಾನು ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯಾಧಾರಗಳಿಂದ ಆರೋಪಿತನು ತನಗೆ ಕಾನೂನಾತ್ಮಕವಾಗಿ ಪಾವತಿಸಬೇಕಾದಂತಹ ಸಾಲಕ್ಕೆ ಪ್ರತಿಯಾಗಿ, ನಿಪಿ–1ರ ಚೆಕ್ಕನ್ನು ಬರೆದುಕೊಟ್ಟಿದ್ದಾನೆಂದು ರುಜುವಾತು ಪಡಿಸಿರುತ್ತಾರೆ ಎನ್ನುವ ಅಭಿಪ್ರಾಯಕ್ಕೆ ಬಂದಿರುತ್ತದೆ. ಆದ್ದರಿಂದ, ಆರೋಪಿತನು ವರ್ಗಾವಣೀಯ ಲಿಖಿತ ಕಾಯ್ದೆ ಅಡಿಯಲ್ಲಿ ಅಪರಾಧ ಎಸಗಿರುವುದು ಸಾಭೀತಾಗಿರುತ್ತದೆ. ಆದ್ದರಿಂದ, ನಿಪಿ–1 ರಲ್ಲಿ ಒಳಗೊಂಡಿರುವ 7,50,000/– ರೂ. ಹಣದೊಂದಿಗೆ ಆರೋಪಿತನು ಪರಿಹಾರವನ್ನು ಸಹ, ಪಿರ್ಯಾದಿಗೆ ಪಾವತಿಸಲು ಬದ್ಧನಾಗಿದ್ದಾನೆ ಎಂಬ ಅಭಿಪ್ರಾಯಕ್ಕೆ ಈ ನ್ಯಾಯಾಲಯವು ಬಂದಿರುತ್ತದೆ.

34. ದಿನಾಂಕಃ 16.02.2021 ರಂದು ಆರೋಪಿತನು ಪಿರ್ಯಾದಿಯಿಂದ 7,50,000/– ರೂ.ಗಳನ್ನು ಸಾಲವಾಗಿ ಪಡೆದುಕೊಂಡು ಈವರೆಗೆ 5 ವರ್ಷಕ್ಕೂ ಹೆಚ್ಚು ಸಮಯ ಕಳೆದಿದ್ದರೂ ಸಹ, ಸದರಿ ಸಾಲವನ್ನು ಮರುಪಾವತಿ ಮಾಡಿರುವುದಿಲ್ಲ. ವಾರ್ಷಿಕ ಶೇ.9 ರಂತೆ ಸರಳ ಬಡ್ಡಿಯನ್ನು ವಿಧಿಸಿದರೂ ಸಹ 3,65,000/– ಕ್ಕಿಂತ ಹೆಚ್ಚು ಬಡ್ಡಿಯಾಗುತ್ತದೆ. ಆದ್ದರಿಂದ, ದಂಡ ಪ್ರಕ್ರಿಯಾ

ಸಂಹಿತೆ ಕಲಂ 357 ರ ಅಡಿಯಲ್ಲಿ ಪಿರ್ಯಾದಿಯು ಸೂಕ್ತ ಪರಿಹಾರವನ್ನು ಸಹ, ಪಡೆದುಕೊಳ್ಳಲು ಅರ್ಹನಿರುತ್ತಾನೆ ಮತ್ತು ಚೆಕ್ಕಿನ ಮೊತ್ತದೊಂದಿಗೆ ಹೆಚ್ಚುವರಿಯಾಗಿ 3,50,000/- ರೂ. ಜುಲ್ಮಾನೆಯನ್ನು ಭರಿಸಲು ಆರೋಪಿತನು ಬಾಧ್ಯನಾಗಿದ್ದಾನೆ ಎಂಬ ಅಭಿಪ್ರಾಯಕ್ಕೆ ಬರುತ್ತಾ, ಮೇಲಿನ ಅಂಶ 1 ರಿಂದ 4 ನ್ನು **ಸಕಾರಾತ್ಮಕವಾಗಿ** ಉತ್ತರಿಸುತ್ತೇನೆ.

35. **ಅಂಶ-5** ಮೇಲಿನ ಅಂಶ 1 ರಿಂದ 4 ರಲ್ಲಿ ಚರ್ಚಿಸಿದ ಕಾರಣಗಳಿಗಾಗಿ ಈ ಕೆಳಕಂಡಂತೆ:

ಆದೇಶ

ದಂಡ ಪ್ರಕ್ರಿಯಾ ಸಂಹಿತೆಯ ಕಲಂ 255(2) ರಡಿಯಲ್ಲಿ ನೀಡಿರುವ ಅಧಿಕಾರವನ್ನು ಚಲಾಯಿಸಿ, ಆರೋಪಿಯು ಲಿಖಿತ ಪತ್ರಗಳ ವರ್ಗಾವಣೆ ಕಾಯ್ದೆಯ ಕಲಂ 138 ರ ಅಡಿಯಲ್ಲಿ ಅಪರಾಧವನ್ನು ಎಸಗಿದ್ದಾರೆ ಎಂದು ಈ ನ್ಯಾಯಾಲಯವು ನಿರ್ಣಯಿಸಿದೆ.

ಆರೋಪಿಯು ಚೆಕ್ಕಿನ ಹಣದೊಂದಿಗೆ 3,50,000/- ರೂ.ಗಳನ್ನು ಹೆಚ್ಚುವರಿಯಾಗಿ ಅಂದರೆ, ಒಟ್ಟು ರೂ. 11,00,000/- ಗಳನ್ನು ಜುಲ್ಮಾನೆ ಹಣವಾಗಿ ಪಾವತಿಸಲು

ಆದೇಶವನ್ನು ನೀಡಿರುತ್ತದೆ. ಒಂದು ವೇಳೆ ಆರೋಪಿಯು ಸದರಿ ಜುಲ್ಮಾನೆ ಹಣವನ್ನು ಪಾವತಿಸಲು ವಿಫಲವಾದರೆ, 2 ವರ್ಷದವರೆಗೆ ಸಾದಾ ಕಾರಾಗೃಹವಾಸದ ಶಿಕ್ಷೆಯನ್ನು ಅನುಭವಿಸಬೇಕಾಗುತ್ತದೆ ಎಂದು ಆದೇಶಿಸಿದೆ.

ಮುಂದುವರೆದು ಆರೋಪಿತನು ಜುಲ್ಮಾನೆ ಹಣದಲ್ಲಿ ರೂ. 10,000/- ಗಳನ್ನು ರಾಜ್ಯ ಸರ್ಕಾರಕ್ಕೆ ಪಾವತಿಸಲು ಆದೇಶಿಸಲಾಗಿದೆ. ಉಳಿದ ಜುಲ್ಮಾನೆ ಹಣವನ್ನು ಆರೋಪಿತನು ದಂಡ ಪ್ರಕ್ರಿಯಾ ಸಂಹಿತೆಯ ಕಲಂ. 357 ರ ಅಡಿಯಲ್ಲಿ ಪಿರ್ಯಾದಿಗೆ ಪರಿಹಾರವಾಗಿ ನೀಡತಕ್ಕದ್ದು ಎಂದು ಆದೇಶಿಸುತ್ತದೆ.

ಆರೋಪಿಗೆ ತೀರ್ಪಿನ ದೃಢೀಕೃತ ಪ್ರತಿಯನ್ನು ಉಚಿತವಾಗಿ ನೀಡುವಂತೆ ಕಚೇರಿಗೆ ನಿರ್ದೇಶಿಸಲಾಗಿದೆ.

(ಶೀಘ್ರಲಿಪಿಗಾರರಿಂದ ನೇರವಾಗಿ ಕಂಪ್ಯೂಟರಿನಲ್ಲಿ ಬೆರಳಚ್ಚು ಮಾಡಿಸಿ, ನಂತರ ಅದನ್ನು ಓದಿ, ತಪ್ಪುಗಳನ್ನು ತಿದ್ದುಪಡಿಮಾಡಿ, ಈ ದಿನ ಅಂದರೆ, ದಿನಾಂಕಃ 4 ನೇ ಆಗಸ್ಟ್ 2026 ರಂದು ತೆರೆದ ನ್ಯಾಯಾಲಯದಲ್ಲಿ ಉದ್ಘೋಷಿಸಿದ್ದೇನೆ.)

(ಮಾದೇಶ ಎಂ.ವಿ.,)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.,ಸಾಗರ.

ಅನುಬಂಧ

1. ಪಿರ್ಯಾದುದಾರರ ಪರವಾಗಿ ವಿಚಾರಣೆಯಾದ ಸಾಕ್ಷಿಗಳ ಪಟ್ಟಿ:

ಪಿ.ಡಬ್ಲ್ಯೂ–1	ಕಿರಣ ಇ. ಬಿನ್ ಈಶ್ವರಪ್ಪ ಎಂ.

2. ಪಿರ್ಯಾದುದಾರರ ಪರ ಗುರ್ತಿಸಲಾದ ದಾಖಲೆಗಳ ಪಟ್ಟಿ:

ನಿ.ಪಿ–1	ಅಸಲು ಚೆಕ್
ನಿ.ಪಿ–2	ಬ್ಯಾಂಕ್ ಹಿಂಬರಹ
ನಿ.ಪಿ–3	ನೋಟೀಸ್ ಪ್ರತಿ
ನಿ.ಪಿ–4	ಅಂಚೆ ರಶೀದಿ
ನಿ.ಪಿ–5	ಅಂಚೆ ಲಕೋಟೆ.
ನಿ.ಪಿ–6	ದೂರು.
ನಿ.ಪಿ– 7	ಸ್ವ–ಪ್ರಮಾಣಿತ ಹೇಳಿಕೆ.
ನಿ.ಪಿ–8	ನೋಟೀಸ್.
ನಿ.ಪಿ–9	ನೋಟೀಸ್ ಗೆ ನೀಡಿದ ಉತ್ತರ ನೋಟೀಸ್.

3. ಆರೋಪಿಯ ಪರ ವಿಚಾರಣೆಯಾದ ಸಾಕ್ಷಿಗಳ ಪಟ್ಟಿ:

– ಏನು ಇಲ್ಲ –

4. ಆರೋಪಿಯ ಪರ ಗುರ್ತಿಸಲಾದ ದಾಖಲೆಗಳ ಪಟ್ಟಿ:

– ಏನು ಇಲ್ಲ –

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

ಜೆ.ಎಂ.ಎಫ್.ಸಿ.,ಸಾಗರ.